10/1/2018 Page (4)

# ಬೆಸ್ಕಾಂ ಮಿತ್ರ ಸೇವಾಶುಲ್ಕ ವಿನಾಯ್ತಿ

## 20 ದಿನಗಳಲ್ಲಿ 40,000 ಡೌನ್‌ಲೋಡ್ | ವಿದ್ಯುತ್ ಬಳಕೆ ಕುರಿತ ಮಾಹಿತಿ

• ಎಂ. ಕೀರ್ತಿಪ್ರಸಾದ್

**ಬೆಂಗಳೂರು:** ವಿದ್ಯುತ್ ಸಂಬಂಧಿ ಸೇವೆಗಳನ್ನು ಆನ್‌ಲೈನ್‌ನಲ್ಲಿ ನೀಡುವ 'ಬೆಸ್ಕಾಂ ಮಿತ್ರ' ಮೊಬೈಲ್ ಆ್ಯಪ್‌ನ್ನು ಗ್ರಾಹಕರು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಉತ್ತೇಜಿಸುವ ನಿಟ್ಟಿನಿಂದ ಇದೀಗ ಆನ್‌ಲೈನ್ ಸೇವಾ ಶುಲ್ಕ ವಿನಾಯ್ತಿ ನೀಡಲು ಬೆಸ್ಕಾಂ ಚಿಂತಿಸಿದೆ.

ಈ ಆ್ಯಪ್‌ನ್ನು 20 ದಿನಗಳಲ್ಲಿ 40,000ಕ್ಕೂ ಹೆಚ್ಚು ಮಂದಿ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಮೊಬೈಲ್ ಆ್ಯಪ್ ಮೂಲಕ ತನ್ನ ಗ್ರಾಹಕರಿಗೆ ಇನ್ನಷ್ಟು ಹೆಚ್ಚುವರಿ ಸೇವೆಗಳನ್ನು ನೀಡುವ ಉದ್ದೇಶ ಹೊಂದಿರುವ ಬೆಸ್ಕಾಂ, ಫೇಸ್‌ಬುಕ್, ಟ್ವಿಟರ್‌ನಲ್ಲಿ ಸಲ್ಲಿಕೆಯಾಗುವ ದೂರುಗಳಿಗೂ 'ಸೆಂಟಿಮೆಂಟ್ ಅನಾಲಿಸಿಸ್' ಮೂಲಕ ಸ್ಪಂದಿಸುವ ವ್ಯವಸ್ಥೆ ಕಲ್ಪಿಸಲು ಪ್ರಯತ್ನ ನಡೆಸಿದೆ.

ರಾಜ್ಯದಲ್ಲಿ ಬಳಕೆಯಾಗುವ ವಿದ್ಯುತ್‌ನಲ್ಲಿ 45%ರಷ್ಟು ವಿದ್ಯುತ್ ಬೆಸ್ಕಾಂ ವ್ಯಾಪ್ತಿಯಲ್ಲೇ ಬಳಕೆಯಾಗುತ್ತದೆ. ಅಲ್ಲದೇ 1.04 ಕೋಟಿ ಗ್ರಾಹಕರು ಬೆಸ್ಕಾಂ ವ್ಯಾಪ್ತಿಯಲ್ಲಿದ್ದಾರೆ. ಬೆಂಗಳೂರು ನಗರದಲ್ಲೇ ಹೆಚ್ಚಿನ ಸಂಖ್ಯೆ ಗ್ರಾಹಕರಿದ್ದು ಬಳಕೆಯೂ ಹೆಚ್ಚಾಗಿದೆ. ಆ ಹಿನ್ನೆಲೆಯಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಡಿ.20ರಂದು 'ಬೆಸ್ಕಾಂ ಮಿತ್ರ' ಮೊಬೈಲ್ ಆ್ಯಪ್‌ಗೆ ಚಾಲನೆ ನೀಡಲಾಗಿದೆ. ಆನ್‌ಲೈನ್‌ನಲ್ಲೇ ದೂರು ಸಲ್ಲಿಕೆ ಸೇರಿದಂತೆ ಬಿಲ್ ಪಾವತಿವರೆಗೆ ಅಂಗೈಯಲ್ಲೇ ಕಾರ್ಯ ನಿರ್ವಹಿಸಬಹುದಾಗಿದ್ದು, ಬಿಲ್ ಪಾವತಿಗೆ ಏಳು ದಿನ ಬಾಕಿ ಇರುವಾಗ ಆ್ಯಪ್ ಬಳಕೆದಾರರಿಗೆ ಎಸ್‌ಎಂಎಸ್ ಸಂದೇಶ ರವಾನೆ ಸೇವೆಯೂ ಆರಂಭವಾಗಿದೆ. ವಿದ್ಯುತ್ ಬಳಕೆ ಕುರಿತ ಸಂಪೂರ್ಣ ಮಾಹಿತಿ ಇದರಲ್ಲೇ ದೊರೆಯಲಿದೆ.

**40,000 ಡೌನ್‌ಲೋಡ್:** ಈವರೆಗೆ 40,000ಕ್ಕೂ ಹೆಚ್ಚು ಮಂದಿ ಆ್ಯಪ್ ಡೌನ್‌ಲೋಡ್ ಮಾಡಿದ್ದು ಆ ಪೈಕಿ ನಾಲ್ಕು ಸಾವಿರಕ್ಕೂ ಹೆಚ್ಚು ಗ್ರಾಹಕರು ಮೊಬೈಲ್ ಆ್ಯಪ್‌ನಲ್ಲಿ ಬಿಲ್ ಪಾವತಿಸಿದ್ದಾರೆ. ಇದರಿಂದ 64 ಲಕ್ಷ ರೂ. ಸಂಗ್ರಹವಾಗಿದೆ. ಬೆಂಗಳೂರು ನಗರದಲ್ಲೇ ಅತಿ ಹೆಚ್ಚು ಮಂದಿ ಡೌನ್‌ಲೋಡ್ ಮಾಡಿದ್ದು ಇತ್ತೀಚಿನ ಮಾಹಿತಿ ಪ್ರಕಾರ 21,755ಕ್ಕೂ ಹೆಚ್ಚು ಮಂದಿ ಬಳಸುತ್ತಿದ್ದಾರೆ. ಗ್ರಾಹಕರು ಹೆಚ್ಚಾಗಿ ಬಳಸುವಂತೆ ಪ್ರೇರಣೆ ನೀಡಲು ಆ್ಯಪ್‌ನಲ್ಲೇ ಇನ್ನಷ್ಟು ಸೇವೆಗಳನ್ನು ಕಲ್ಪಿಸಲು ಬೆಸ್ಕಾಂ ಸಿದ್ಧತೆ ನಡೆಸಿದೆ.

### ಆನ್‌ಲೈನ್ ಸೇವಾ ಶುಲ್ಕ ವಿನಾಯ್ತಿ?

ಗ್ರಾಹಕರು ಮೊಬೈಲ್ ಆ್ಯಪ್ ಮೂಲಕವೇ ಆನ್‌ಲೈನ್‌ನಲ್ಲಿ ಬೆಸ್ಕಾಂ ಬಿಲ್ ಪಾವತಿಸುದಾಗ ಬ್ಯಾಂಕ್‌ಗಳು ಇಂತಿಷ್ಟು ಆನ್‌ಲೈನ್ ಸೇವಾ ಶುಲ್ಕ ವಿಧಿಸುತ್ತವೆ. ಹಾಗಾಗಿ ಆನ್‌ಲೈನ್ ಸೇವಾ ಶುಲ್ಕ ವಿನಾಯ್ತಿ ನೀಡುವ ಸಂಬಂಧ ಪ್ರತಿಷ್ಠಿತ ಬ್ಯಾಂಕ್‌ಗಳೊಂದಿಗೆ ಮಾತುಕತೆ ನಡೆಸಲು ಬೆಸ್ಕಾಂ ಚಿಂತನೆ ನಡೆಸಿದೆ. ಮಾತುಕತೆಗೂ ಸಿದ್ಧತೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.




### ಸೆಂಟಿಮೆಂಟ್ ಅನಾಲಿಸಿಸ್

[illegible] ದೂರು ಸಲ್ಲಿಸಲು ಸಹಾಯವಾಣಿ, ಮೊಬೈಲ್ ಆ್ಯಪ್ ಇದ್ದರೂ ಸಾಮಾಜಿಕ ಜಾಲತಾಣಗಳಲ್ಲೂ [illegible]

---

## ನಾಳೆ, ನಾಡಿದ್ದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

**ಬೆಂಗಳೂರು:** ಬೆಸ್ಕಾಂ ವ್ಯಾಪ್ತಿಯಲ್ಲಿ 66/11 ಕೆವಿ ರಾಜಾನುಕುಂಟೆ ಕೇಂದ್ರದಲ್ಲಿ ವಿದ್ಯುತ್ ಲೈನ್ ದುರಸ್ತಿ




ಕೆಲಸಗಳಿರುವ ಕಾರಣ, ಜ.11ರಿಂದ 12ರ ಬೆಳಗ್ಗೆ 10ರಿಂದ 5 ಗಂಟೆ ತನಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಹೊನ್ನೇನಹಳ್ಳಿ, ಸಿಂಗನಾಯಕನಹಳ್ಳಿ, ರಾಜಾನುಕುಂಟೆ, ಅದ್ದೆವಿಶ್ವನಾಥಪುರ, ಗಂಟಿಗಾನಹಳ್ಳಿ, ನಾಗದಾಸನಹಳ್ಳಿ, ಅದ್ದಿಗನಹಳ್ಳಿ, ಸಾದೇನಹಳ್ಳಿ, ಸುರದೇನಪುರ, ಮಾರಸಂದ್ರ, ಶ್ರೀರಾಮನಹಳ್ಳಿ, ನೆಲ್ಲಕುಂಟೆ, ಹಣಿಯೂರು, ಚೆಲ್ಲಹಳ್ಳಿ, ಕರ್ಲಾಪುರ, ಕೆಎಂಎಫ್, ಇಟಗ್ಲಾಪುರ, ಅರಕೆರೆ, ಭೈರಾಪುರ, ಬುದ್ದಮನಹಳ್ಳಿ, ದಿಬ್ಬೂರು, ಕಾಕೋಳು, ಸೊಣ್ಣೇನಹಳ್ಳಿ, ಸೆಂಚುರಿ ಲೇಔಟ್ ಸುತ್ತಮುತ್ತ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

---

## ಸೌರಕೋಶ ಪೂರೈಕೆ ತಾರತಮ್ಯ ಆರೋಪ ತಳ್ಳಿಹಾಕಿದ ಭಾರತ

**ಜಿನೀವಾ (ರಾಯಿಟರ್ಸ್):** ಸೌರಕೋಶ ಮತ್ತು ಘಟಕಗಳ (ಮಾಡ್ಯೂಲ್) ವಿದೇಶಿ ಪೂರೈಕೆದಾರರ ವಿರುದ್ಧ ಭಾರತವು ತಾರತಮ್ಯ ಎಸಗಿದೆ ಎಂಬ ಅಮೆರಿಕದ ಆರೋಪವನ್ನು ಭಾರತ ತಳ್ಳಿಹಾಕಿದೆ.

ವಿಶ್ವ ವ್ಯಾಪಾರ ಸಂಘಟನೆಯಲ್ಲಿ (ಡಬ್ಲ್ಯುಟಿಒ) ಭಾರತವು ಸೋಮವಾರ ಈ ಕುರಿತು ಹೇಳಿಕೆ ಬಿಡುಗಡೆ ಮಾಡಿದೆ.

'ಭಾರತದಲ್ಲೇ ತಯಾರಿಸಿದ ಸೌರ ಕೋಶಗಳನ್ನು ಬಳಸುವಂತೆ ಸೌರ ಘಟಕ ಉತ್ಪಾದಕರಿಗೆ ಭಾರತ ಮನವಿ ಮಾಡಿದೆ. ಇದರಿಂದ ಅಮೆರಿಕವು ಭಾರತಕ್ಕೆ ರಫ್ತು ಮಾಡುತ್ತಿದ್ದ ಸೌರಕೋಶ ಮತ್ತು ಘಟಕಗಳ ಪ್ರಮಾಣ ಶೇ 90ರಷ್ಟು ಕುಸಿದಿದೆ' ಎಂಬುದು ಅಮೆರಿಕದ ವಾದ. ಡಬ್ಲ್ಯುಟಿಒದ ನ್ಯಾಯಾಧೀಶರು ಈ ವಾದವನ್ನು ಪರಿಗಣಿಸಿದ್ದಾರೆ.

ಮತ್ತೊಂದು ಕಡೆ, 'ಜಾಗತಿಕ ಸ್ಪರ್ಧೆಯಲ್ಲಿ ಭಾರತದ ಸೌರ ಉದ್ಯಮಗಳು ನಷ್ಟಕ್ಕೊಳಗಾಗಿವೆ. ಹೀಗಾಗಿ ದೇಶಿ ಉದ್ಯಮಗಳಿಗೆ ಒತ್ತಾಸೆಯಾಗುವ ಕ್ರಮಕ್ಕೆ ಮುಂದಾಗಿದ್ದೇವೆ' ಎಂದು ಡಬ್ಲ್ಯುಟಿಒದಲ್ಲಿ ಭಾರತ ಕಳೆದ ವಾರ ಪ್ರಸ್ತಾಪಿಸಿದೆ.

---

## ಸೌರ ಕೋಶ ಆಮದಿಗೆ ಸುಂಕ?

• ಎಕನಾಮಿಕ್ ಟೈಮ್ಸ್ ಹೊಸದಿಲ್ಲಿ

ಕೇಂದ್ರ ಸರಕಾರವು ಚೀನಾ ಮತ್ತು ಮಲೇಷ್ಯಾದಿಂದ ಆಮದಾಗುವ ಸೌರ ಕೋಶಗಳು ಹಾಗೂ ಸೌರಫಲಕಗಳ ಮೇಲೆ, ಶೇ.70ರಷ್ಟು ಸುಂಕವನ್ನು ವಿಧಿಸಲು ಉದ್ದೇಶಿಸಿದೆ. ದೇಶೀಯ ಸೌರ ಕೋಶ, ಫಲಕ ಉತ್ಪಾದನಾ ವಲಯದ ಹಿತ ದೃಷ್ಟಿಯಿಂದ ಆಮದು ಸುಂಕ ವಿಧಿಸಲು ಪ್ರಸ್ತಾಪಿಸಿದೆ. ಚೀನಾ ಮತ್ತು ಮಲೇಷ್ಯಾದಿಂದ ಸೌರ ಕೋಶ, ಫಲಕಗಳ ಭಾರಿ ಆಮದು ಪರಿಣಾಮ ದೇಶೀಯ ಉದ್ದಿಮೆ ಸಂಕಷ್ಟದಲ್ಲಿದೆ. ಈ ಹಿನ್ನೆಲೆಯಲ್ಲಿ ಈ ಎರಡು ದೇಶಗಳಿಂದ ಸೌರ ಕೋಶ ಮತ್ತು ಫಲಕಗಳ ಆಮದು ಮೇಲೆ ಸುಂಕ ಹೇರಲು ಉದ್ದೇಶಿಸಲಾಗಿದೆ ಎಂದು ಸುರಕ್ಷಾ ನಿರ್ದೇಶನಾಲಯ (ಡಿಜಿಎಸ್) ತಿಳಿಸಿದೆ. ಭಾರತೀಯ ಸೋಲಾರ್ ಉತ್ಪಾದಕರ ಸಂಘಟನೆಯು ಇತ್ತೀಚೆಗೆ ಈ ಸಂಬಂಧ ಮನವಿ ಸಲ್ಲಿಸಿತ್ತು. ಇದನ್ನು ಪರಿಶೀಲಿಸಿದ ಡಿಜಿಎಸ್ ಆಮದು ಸುಂಕ ಹೇರಿಕೆಗೆ ಪ್ರಸ್ತಾಪ ಮಾಡಿದೆ.

---

10-01-18.

## ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್

ದೇಶದ ಮೊದಲ ವಿದ್ಯುತ್ ಚಾಲಿತ ವಾಹನ ಚಾರ್ಜಿಂಗ್ ಸ್ಟೇಷನ್ ಅನ್ನು ನಾಗಪುರದ ಪೆಟ್ರೋಲ್ ಪಂಪ್‌ನಲ್ಲಿ ಆರಂಭಿಸಲಾಗಿದೆ. ಸರ್ಕಾರಿ ಸ್ವಾಮ್ಯದ ಭಾರತೀಯ ತೈಲ ನಿಗಮದ (ಐಒಸಿ) ಪೆಟ್ರೋಲ್ ಪಂಪ್‌ನಲ್ಲಿ ಒಲಾ ಕಂಪನಿ ಸಹಭಾಗಿತ್ವದಲ್ಲಿ ಇದನ್ನು ಸ್ಥಾಪಿಸಲಾಗಿದೆ.

ಭಾರತದಲ್ಲೇ ಮೊದಲ ಬಾರಿಗೆ ವಿದ್ಯುತ್ ಚಾಲಿತ ಸಾರ್ವಜನಿಕ ಸಾರಿಗೆ ಪದ್ಧತಿಯನ್ನು ಪರಿಚಯಿಸಿದ ಕೀರ್ತಿಯೂ ನಾಗಪುರಕ್ಕಿದೆ.

ತೈಲ ಸಂಸ್ಕರಣೆ ಮತ್ತು ಮಾರುಕಟ್ಟೆ ಕ್ಷೇತ್ರದಲ್ಲಿ ದೇಶದ ಪ್ರಮುಖ ಕಂಪನಿ ಎಂದೇ ಗುರುತಿಸಿಕೊಂಡಿರುವ ಐಒಸಿ, ಇದೀಗ ಎಲೆಕ್ಟ್ರಿಕ್ ಚಾರ್ಜಿಂಗ್ ಘಟಕ ಆರಂಭದ ಮೂಲಕ ಜೈವಿಕ ಸ್ಥಿರತೆ ಹಾಗೂ ಪರಿಸರ ಮಾಲಿನ್ಯ ತಡೆಗೂ ಕೊಡುಗೆ ನೀಡಿದೆ. ಮುಂದಿನ ದಿನಗಳಲ್ಲಿ ಭಾರತದ ಸಂಚಾರ ವ್ಯವಸ್ಥೆಯನ್ನು ಗಮನದಲ್ಲಿ ಇಟ್ಟುಕೊಂಡು ಇದನ್ನು ಕಾರ್ಯರೂಪಕ್ಕೆ ತಂದಿದೆ.

# ಡ್ರ್ಯಾಗನ್ ಕೊರಳಿಗೆ ಗಂಟೆ ಕಟ್ಟುವವರ್‍ಯಾರು...?

ದೇಶೀಯ ಮಾರುಕಟ್ಟೆ ತುಂಬಾ ಚೀನಾದಿಂದ ಆಮದಾದ ಅಗ್ಗದ ಸರಕುಗಳು ತುಂಬಿ ತುಳುಕುತ್ತಿರುವದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಡ್ರ್ಯಾಗನ್(ಚೀನಾ) ಅಟಾಟೋಪ ಅತಿಯಾದ್ದರಿಂದ ಅದಕ್ಕೆ ಕಡಿವಾಣ ಹಾಕಲು ಕೇಂದ್ರ ವಾಣಿಜ್ಯ ಸಚಿವಾಲಯಕ್ಕೆ ಸಾಕಷ್ಟು ಮನವಿಗಳು ಬಂದಿವೆ. ಚೀನಾ ಸರಕುಗಳ ಮೇಲೆ ಆ್ಯಂಟಿ ಡಂಪಿಂಗ್ ಡ್ಯೂಟಿ(ಸುರಿ ವಿರೋಧಿ ಸುಂಕ- ಯಾವುದೇ ದೇಶವು ಇನ್ನೊಂದು ದೇಶದ ಮಾರುಕಟ್ಟೆಯಲ್ಲಿ ತನ್ನ

**- ಸೂರ್ಯಸಾರಥಿ**
**9483939043**

ಸರಕುಗಳ ದರವನ್ನು ಏಕಾಏಕಿ ಕಡಿಮೆ ಮಾಡಿದರೆ ಅದರಿಂದ ದೇಶೀಯ ಸರಕುಗಳ ಮಾರಾಟದ ಮೇಲಾಗುವ ವ್ಯತಿರಿಕ್ತ ಪರಿಣಾಮಗಳನ್ನು ತಡೆಗಟ್ಟಲು ಆ ದೇಶದಿಂದ ರಫ್ತು ಮಾಡಲಾದ ಅಗ್ಗದ ಸರಕುಗಳ ಮೇಲೆ ಹೆಚ್ಚಿನ ಪ್ರಮಾಣದ ಆಮದು ಸುಂಕ ವಿಧಿಸಲಾಗುತ್ತದೆ) ವಿಧಿಸಬೇಕೆನ್ನುವುದೇ ಈ ಎಲ್ಲಾ ಮನವಿಗಳ ಒಕ್ಕೊರಲ ಒತ್ತಾಯ.

ಉದಾಹರಣೆಗೆ ಹೇಳುವುದಾದರೆ ಕಳೆದ ವರ್ಷ ಜೂನ್ 3ರಂದು ಭಾರತೀಯ ಸೋಲಾರ್ ಉತ್ಪಾದಕರ ಸಂಘವು ಚೀನಾದಿಂದ ಆಮದಾದ ಸೌರ ಕೋಶಗಳ(ಸೋಲಾರ್ ಸೆಲ್ಸ್) ಮೇಲೆ ಸುರಿ ವಿರೋಧಿ ಸುಂಕ ಹೇರಬೇಕೆಂದು ಕೇಂದ್ರ ವಾಣಿಜ್ಯ ಸಚಿವಾಲಯದ ಸುರಿ ವಿರೋಧಿ ಮತ್ತು ಇತರೇ ಸುಂಕಗಳ ಜಾರಿ ಮಹಾನಿರ್ದೇಶನಾಲಯಕ್ಕೆ(ಡಿಜಿಎಡಿ) ಮನವಿ ಮಾಡಿಕೊಂಡಿದೆ. ಸಾಮಾನ್ಯವಾಗಿ ಚೀನಾದ ಸೌರ ಕೋಶಗಳು ಸ್ಥಳೀಯ ಉತ್ಪಾದಕರ ಕೋಶಗಳಿಗೆ ಹೋಲಿಸಿದರೆ ಶೇ.35ರಷ್ಟು ಅಗ್ಗವಾಗಿವೆ. ಸೌರ ಫಲಕಗಳ ದರ ಶೇ.10-15ರಷ್ಟು ಕಡಿಮೆ. ಈಗಾಗಲೇ ಅಮೆರಿಕ ಹಾಗೂ ಐರೋಪ್ಯ ಒಕ್ಕೂಟದ ದೇಶಗಳು ಚೀನಾದಿಂದ ಆಮದಾದ ಸೌರ ಉತ್ಪನ್ನಗಳ ಮೇಲೆ ಹೆಚ್ಚಿನ ಸುಂಕಗಳನ್ನು ಹೇರಿವೆ. ನಮ್ಮ ದೇಶವೂ ಈ ಕ್ರಮವನ್ನು ಅನುಸರಿಸಬೇಕೆಂದು ಸಂಘವು ಬಯಸುತ್ತದೆ. ಆದರೆ ಈ ಮನವಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ.

ಇದು ಕೇವಲ ಸೋಲಾರ್ ಉತ್ಪಾದಕರದ್ದೊಂದೇ ಗೋಳಲ್ಲ. ದೇಶೀಯ ಉಕ್ಕು, ಎಲೆಕ್ಟ್ರಾನಿಕ್ ಉಪಕರಣಗಳು, ಮೊಬೈಲ್ ಫೋನ್, ಔಷಧಿ, ರಾಸಾಯನಿಕ ಪದಾರ್ಥಗಳ ಕಂಪನಿಗಳು ಚೀನಾದ ಅಗ್ಗದ ಉತ್ಪನ್ನಗಳ ಭರಾಟೆಯನ್ನು ತಾಳಲಾರದೆ ಕಂಗಾಲಾಗಿ ಕುಳಿತಿವೆ. ಪ್ರಸ್ತುತ ಡಿಜಿಎಡಿಯು 381 ಆ್ಯಂಟಿ ಡಂಪಿಂಗ್ ಆರೋಪಗಳ ಬಗ್ಗೆ ತನಿಖೆ ಕೈಗೊಂಡಿದೆ. ಈ ಪೈಕಿ 217 ಚೀನಾಕ್ಕೆ ಸಂಬಂಧಿಸಿದ್ದಾಗಿವೆ. ಆದರೆ ಈಗಾಗಲೇ ಭಾರತ ಚೀನಾದ ಮೀನುಬಲೆ ಹಾಗೂ ಪಾಲಿಸ್ಟರ್ ಯಾರ್ನ್(ಎಳೆ) ಉತ್ಪನ್ನಗಳ ಮೇಲೆ ಸುರಿ ವಿರೋಧಿ ಸುಂಕವನ್ನು ಹೇರಿವೆ. ಸದ್ಯಕ್ಕೆ ಚೀನಾದಿಂದ ಸರಕುಗಳ ಆಮದು ಪ್ರಮಾಣ 2009-10ರಲ್ಲಿ 30.8 ಶತಕೋಟಿ ಡಾಲರ್‌ದಷ್ಟಿದ್ದುದು 2016-17ರ ವೇಳೆಗೆ 61.3 ಶತಕೋಟಿ ಡಾಲರ್‌ಗೆ ವೃದ್ಧಿಯಾಗಿದೆ. 2017ನೇ ಸಾಲಿನ ಮೇ ತಿಂಗಳಿನಲ್ಲಿ ಘೋಷಣೆಯಾದ ರಾಷ್ಟ್ರೀಯ ಉಕ್ಕು ನೀತಿಯು ಚೀನಾ ಉಕ್ಕು ಆಮದಿನ ಮೇಲೆ ಅತಿಯಾಗಿ ಅವಲಂಬಿತವಾಗಬಾರದೆಂಬ ಅಂಶಕ್ಕೆ ಹೆಚ್ಚಿನ ಒತ್ತು ನೀಡಿದೆ. 2016-17ನೇ ಸಾಲಿನಲ್ಲಿ ಚೀನಾದಿಂದ 3.3 ದಶಲಕ್ಷ ಮೆಟ್ರಿಕ್ ಟನ್ ಪ್ರಮಾಣದ ಉಕ್ಕು ಆಮದಾಗಿದೆ.

**ಕಳೆದ ವರ್ಷ ಜೂನ್ 3ರಂದು ಭಾರತೀಯ ಸೋಲಾರ್ ಉತ್ಪಾದಕರ ಸಂಘವು ಚೀನಾದಿಂದ ಆಮದಾದ ಸೌರ ಕೋಶಗಳ(ಸೋಲಾರ್ ಸೆಲ್) ಮೇಲೆ ಸುರಿ ವಿರೋಧಿ ಸುಂಕ ಹೇರಬೇಕೆಂದು ಕೇಂದ್ರ ವಾಣಿಜ್ಯ ಸಚಿವಾಲಯದ ಸುರಿ ವಿರೋಧಿ ಮತ್ತು ಇತರೇ ಸುಂಕಗಳ ಜಾರಿ ಮಹಾನಿರ್ದೇಶನಾಲಯಕ್ಕೆ(ಡಿಜಿಎಡಿ) ಮನವಿ ಮಾಡಿಕೊಂಡಿದೆ. ಆದರೆ ಈ ಮನವಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ ಡ್ರ್ಯಾಗನ್ ಕೊರಳಿಗೆ ಗಂಟೆ ಕಟ್ಟುವವರ್‍ಯಾರು ಎಂಬುದು ಸದ್ಯದ ಪ್ರಶ್ನೆಯಾಗಿದೆ.**



### ಹೇಳಿದಷ್ಟು ಸುಲಭವಲ್ಲ

ಆದರೆ ಚೀನಾದಿಂದ ಆಮದುಗಳನ್ನು ಕಡಿಮೆ ಮಾಡಬೇಕೆನ್ನುವದು ಹೇಳಿದಷ್ಟು ಸುಲಭವಲ್ಲ. ಚೀನಾ ಸರಕುಗಳ ಆಮದು ಹೆಚ್ಚಾಗಿದ್ದರಿಂದ ಮಾರುಕಟ್ಟೆಯಲ್ಲಿ ಪೈಪೋಟಿ ಹೆಚ್ಚಿ ಎಷ್ಟೋ ಉತ್ಪನ್ನಗಳು ಸ್ಪರ್ಧಾತ್ಮಕ ದರದಲ್ಲಿ ಗ್ರಾಹಕರಿಗೆ ದೊರಕುವಂತಾಗಿದೆ. ಉದಾಹರಣೆಗೆ ಕಳೆದ ಎರಡು ವರ್ಷಗಳಲ್ಲಿ ಸೌರ ವಿದ್ಯುತ್ ದರ ಇಳಿಮುಖವಾಗಿದೆ, ಚೀನಾದಿಂದ ಆಮದಾದ ಅಗ್ಗದ ಸೋಲಾರ್ ಉತ್ಪನ್ನಗಳನ್ನು ಸೋಲಾರ್ ವಿದ್ಯುತ್ ಉತ್ಪಾದನೆಯಲ್ಲಿ ಬಳಕೆ ಮಾಡಿದ್ದೇ ಇದಕ್ಕೆ ಕಾರಣ.

ಪರಿಸ್ಥಿತಿ ಹೀಗಿರುವಾಗ ಚೀನಾದ ಸೋಲಾರ್ ಉತ್ಪನ್ನಗಳ ಮೇಲೆ ಸುರಿ ವಿರೋಧಿ ಸುಂಕ ಹೇರಿದರೆ ಅವುಗಳ ಬೆಲೆ ಜಾಸ್ತಿಯಾಗುತ್ತದಲ್ಲದೇ, ಸೌರ ವಿದ್ಯುತ್ ದರ ಏರಿಕೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳುತ್ತಾರೆ.

ಒಟ್ಟಿನಲ್ಲಿ ದೇಶೀಯ ಉದ್ಯಮಗಳು ಡ್ರ್ಯಾಗನ್ ಆಕ್ರಮಣ ತಡೆಗಟ್ಟಲು ತಮ್ಮ ಎಲ್ಲಾ ಅಸ್ತ್ರಗಳೊಂದಿಗೆ ತೊಡೆ ತಟ್ಟಿ ಸಜ್ಜಾಗಿರುವದು ವಿಶೇಷವಾಗಿದೆ.

## ವಿದ್ಯುತ್ ದರ ಹೆಚ್ಚಳ ಸಾಧ್ಯತೆ

**ನವದೆಹಲಿ:** ಸರ್ಕಾರಿ ಸ್ವಾಮ್ಯದ ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್), ಕಲ್ಲಿದ್ದಲು ಬೆಲೆಯನ್ನು ಮಂಗಳವಾರ ರಾತ್ರಿಯಿಂದಲೇ ಜಾರಿಗೆ ಬರುವಂತೆ ಏರಿಕೆ ಮಾಡಿದೆ. ಪ್ರಸ್ತುತ ಇರುವ ದರದ ಮೇಲೆ ಶೇ. 8.5ರಷ್ಟು ಬೆಲೆ ಏರಿಸಲಾಗಿದೆ. ಇದರ ಪರಿಣಾಮ, ಕಲ್ಲಿದ್ದಲು ವಿದ್ಯುತ್ ನಿಗಮಗಳು ವಿದ್ಯುತ್ ಬಳಕೆದಾರರ ಮೇಲೆ ಪ್ರತಿ ಯೂನಿಟ್‌ಗೆ 50 ಪೈಸೆಯಷ್ಟು ದರವನ್ನು ಏರಿಕೆ ಮಾಡುವ ಸಾಧ್ಯತೆ ಇದೆ.